ಶ್ರೀ ವಿಜಯಕುಮಾರ್ ಶೆಟ್ಟಿ.—ಹೌದು.

ಅಧ್ಯಕ್ಷರು.—ಮಂಗಳೂರು ರೀಫೈನರಿ ಪ್ರಾಜೆಕ್ಟ್ ಗೌರ್ನಮೆಂಟ್ ಆಫ್ ಇಂಡಿಯಾಗೆ ಸಂಬಂಧ ಪಟ್ಟದ್ದು, ಈ ಸಚಿವರನ್ನು ತಾವು ಕೇಳಿದರೆ ಇವರು ಹೇಗೆ ಉತ್ತರ ಕೊಡುತ್ತಾರೆ ? ಮಾನ್ಯ ಸಚಿವರು ಇದರ ಬಗ್ಗೆ ಏನಾದರೂ ಹೇಳುತ್ತಾರೆಯೇ ?

ಶ್ರೀ ಬಿ. ಶಿವಣ್ಣ —ಆದರ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಗೊತ್ತಿರುವುದು ನನಗೆ ಸಂಬಂಧ ಪಟ್ಟ ರಾಜ್ಯದ ಲೇಬರ್ ಡಿಪಾರ್ಟ್‌ಮೆಂಟಿನದು ಮಾತ್ರ.

ಶ್ರೀ ಎಂ. ಪಿ. ವೆಂಕಟೇಶ್ —ಎಲ್ಲದಕ್ಕೂ ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಾರೆ. ಆದಕ್ಕೆ ಈ ಪ್ರಶ್ನೆಗೂ ಪರಿಶೀಲನೆ ಮಾಡುತ್ತೇನೆಂದು ಹೇಳುತ್ತಾರೇನೋ ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶಿವಣ್ಣನವರನ್ನು ಪರಿಶೀಲನಾ ಮಂತ್ರಿ ಎಂದು ನೇಮಕ ಮಾಡಬೇಕು. ಅವರ ಇಲಾಖೆ ಎಂದರೆ ಪರಿಶೀಲನಾ ಇಲಾಖೆ.

ಅಧ್ಯಕ್ಷರು.—ಶ್ರೀಮತಿ ದಮಯಂತಿ ಬೋರೇಗೌಡ ಅವರ ಪ್ರಶ್ನೆಗೆ ಉತ್ತರವನ್ನು ಕೊಡಲು ಮಾನ್ಯ ಮಂತ್ರಿಯವರು ಟೈಮ್ ಕೇಳಿದ್ದಾರೆ.

ಶ್ರೀಮತಿ ದಮಯಂತಿ ಬೋರೇಗೌಡ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಕೊಡುವುದು ಅಷ್ಟೇನೂ ಕಷ್ಟಕರವಾದುದಲ್ಲ. ಆದರೂ ಏಕೆ ನಿಧಾನವಾಗುತ್ತದೆ ?

ಅಧ್ಯಕ್ಷರು —ಯಾವ ಸದಸ್ಯರು ಆಗಲೇ ಇರಲಿಲ್ಲವೋ ಅಂಥವರುಗಳ ಹೆಸರುಗಳನ್ನು ಮತ್ತೊಮ್ಮೆ ಕರೆಯುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ರಮಾನಾಥ ರೈ ಮತ್ತು ಶ್ರೀ ಯಂಕಾನಾಯಕ್‌ರವರು ಸಭೆಯಲ್ಲಿ ಹಾಜರಿರಲಿಲ್ಲ.)

ಪರಪನಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಹಾಸ್ಟೆಲ್ ಕಟ್ಟಡದ ಬಗ್ಗೆ

೬೦೨. ಶ್ರೀ ಬಿ. ಹೆಚ್. ಯಂಕಾನಾಯ್ಕ (ಪರಪನಹಳ್ಳಿ).—ಮಾನ್ಯ ಸಮಾಜ ಕಲ್ಯಾಣ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯ ನಿರ್ಮಾಣ ಮಾಡಲು ಯಾವ ವರ್ಷ ಆಡಿಗಲ್ಲು ಹಾಕಲಾಯಿತು ?

ಆ) ಈಗ ಕಟ್ಟಡ ಯಾವ ಹಂತದಲ್ಲಿದೆ ?

ಇ) ಈ ಕಟ್ಟಡವನ್ನು ಎಂದು ಪೂರ್ಣಗೊಳಿಸಲಾಗುವುದು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).—

ಅ) ೧೯೮೬ರಲ್ಲಿ

ಆ) ಈಗ ಕಟ್ಟಡವು ಪ್ಲಿಂತ್ ಲೆವೆಲ್‌ವರೆವಿಗೂ ಬಂದಿದೆ.

ಇ) ಶೀಘ್ರವಾಗಿ ಮುಗಿಸಲಾಗುವುದು.

ಶ್ರೀ ಬಿ. ಹೆಚ್. ಯಂಕಾನಾಯಕ್ —ನಮ್ಮ ತಾಲ್ಲೂಕಿನಲ್ಲಿ ಹರಿಜನರ ಮಕ್ಕಳಿಗೆ ಒಂದು ಹಾಸ್ಟೆಲ್ ಕಟ್ಟಡ ಕಟ್ಟಬೇಕೆಂದು ಹಿಂದಿನ ಸರ್ಕಾರ ಇದ್ದಾಗ ಆಡಿಗಲ್ಲು ಹಾಕಲಾಗಿತ್ತು. ಆದರೆ ಈವರೆಗೂ ಆ ಕಟ್ಟಡದ ಕಾರ್ಯ ಆರಂಭವಾಗಿಲ್ಲ. ಇದರ ಬಗ್ಗೆ ಜಿಲ್ಲಾಪರಿಷತ್ತಿನವರು ಕ್ರಮ ತೆಗೆದುಕೊಳ್ಳಬೇಕೇ ಅಥವಾ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಕ್ರಮ ತೆಗೆದುಕೊಳ್ಳಬೇಕೇ ಎಂದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ. ಶಿವಣ್ಣ.—ಈ ಕಟ್ಟಡದ ಯೋಜನೆಗೆ ಸರ್ಕಾರವೇ ೧ ಲಕ್ಷ ರೂಪಾಯಿಗಳ ಒಂದು ಯೋಜನೆಯೆಂದು ತಯಾರು ಮಾಡಿ ಹಣವನ್ನು ಬಿಡುಗಡೆ ಮಾಡಿತ್ತು. ಅದರಲ್ಲಿ ೧೭ ಸಾವಿರದ ೫೦೦ ರೂಪಾಯಿಗಳನ್ನು ವಿನಿಯೋಗ ಮಾಡಿ ಕೆಲಸವನ್ನು ಪ್ರಾರಂಭ ಮಾಡಲಾಗಿದೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಈ ಯೋಜನೆಯೂ ಸಹ ಜಿಲ್ಲಾಪರಿಷತ್ತಿನ ವ್ಯಾಪ್ತಿಯೊಳಗೆ ಬರುತ್ತದೋ ಅಥವಾ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನ ವ್ಯಾಪ್ತಿಯೊಳಗೆ ಬರುತ್ತದೆಯೋ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ಶಿವಣ್ಣ.—ಜಿಲ್ಲಾಪರಿಷತ್ತಿನ ಮೂಲಕ ಆ ಕೆಲಸವನ್ನು ಮಾಡಿಸಿಕೊಡುತ್ತೇವೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಇನ್ನೆಷ್ಟು ವರ್ಷಗಳಲ್ಲಿ ಆ ಕೆಲಸವನ್ನು ಮಾಡಿಸಿ ಕೊಡುತ್ತೀರಿ ?

ಶ್ರೀ ಬಿ. ಶಿವಣ್ಣ.—ಇನ್ನು ಸ್ವಲ್ಪ ದಿವಸಗಳಲ್ಲೇ ಆ ಕೆಲಸವನ್ನು ಮುಗಿಸಲಾಗುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಅಂತಹ ಕಷ್ಟಕರವಾದುದಲ್ಲ, ಆದರೂ ಉತ್ತರ ಒದಗಿಸದಿರಲು ಕಾರಣವೇನು ? ಮತ್ತೆ ನಾನು ಮತ್ತು ಇತರ ನಾಲ್ವರು ಮಹಿಳಾ ಸದಸ್ಯರು ಸೇರಿ ಒಂದು ಗಮನ ಸೆಳೆಯುವ ಸೂಚನೆ ಕಳಿಸಿದ್ದೆವು. ಅದಕ್ಕೂ ಸಹ ಉತ್ತರ ಬರಲಿಲ್ಲ. ಇದಕ್ಕೆ ಏನು ಹೇಳುವುದು ?

ಕಲ್ಲು ತೆಗೆಯುವ ಗುತ್ತಿಗೆಗಾಗಿ ಬಂದಿರುವ ಅರ್ಜಿಗಳ ಬಗ್ಗೆ

೩೮೩. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೮ನೇ ಇಸವಿಯಿಂದ ೧೯೯೦ ಫೆಬ್ರುವರಿ ಕೊನೆಯವರೆಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಕಲ್ಲು ಗಣಿ ಗುತ್ತಿಗೆಗೆ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ? ವಿಲೇವಾರಿ ಆದ ಅರ್ಜಿಗಳ ಸಂಖ್ಯೆ ಎಷ್ಟು ?

ಆ) ವಿಲೇವಾರಿ ಮಾಡದ ಅರ್ಜಿಗಳೆಷ್ಟು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ೧೯೮೮ ರಿಂದ ೧೯೯೦ರ ಫೆಬ್ರುವರಿ ಅಂತ್ಯಕ್ಕೆ ಬಂದ ೨೯೪೮ ಅರ್ಜಿಗಳಲ್ಲಿ ೬೦೬ ಅರ್ಜಿಗಳನ್ನು ವಿಲೇವಾರಿ ಮಾಡಲಾಯಿತು.

ಆ) ೨೩೪೨.

೧೦-೦೦ ಎ. ಎಂ.

ಶ್ರೀ ಕೆ. ಕುಶಾಲ.—ಅಧ್ಯಕ್ಷರೇ, ಈ ಕಲ್ಲು ಮಂತ್ರ ಗಣಿ ಇಲಾಖೆಗೆ ಒಬ್ಬ ಫಲಾನುಭವಿಯು ಅರ್ಜಿ ಸಲ್ಲಿಸಿದ ನಂತರ ಆಪರೇಟಿಂಗ್ ಆವಧಿ ಕೇವಲ ೨ ತಿಂಗಳು, ಆದರೆ ಈ ಇಲಾಖೆಯಲ್ಲಿ ಹೆಚ್ಚೂ ಕಡಿಮೆ ಒಂದೇ ವರ್ಷದಲ್ಲಿ ಬಂದಂಥ ಅರ್ಜಿಗಳ ಸಂಖ್ಯೆ ೨೯೪೮. ಅದರಲ್ಲಿ ವಿಲೇ ಆದದ್ದು ಕೇವಲ ೬೦೬. ಒಬ್ಬ ಫಲಾನುಭವಿಗೆ ಕೇವಲ ಎರಡು ತಿಂಗಳ ಅವಧಿ ಇರುವಾಗ ಇನ್ನುಳಿದ ಅರ್ಜಿಗಳನ್ನು ಯಾವಾಗ ವಿಲೇವಾರಿ ಮಾಡುತ್ತೀರಿ ? ಇದರಿಂದ ಎಷ್ಟು ಜನರಿಗೆ ಅನುಕೂಲ ಆಗುತ್ತದೆ ? ಈ ಇಲಾಖೆಯಲ್ಲಿ ಸಿಬ್ಬಂದಿಗಳು ಅಧಿಕಾರಿಗಳು ಹೆಚ್ಚು ಇದ್ದರೂ ಕೂಡ ತುಂಬಾ ಅನಾನುಕೂಲವಾಗುತ್ತಿದೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಇನ್ನೂ ೨೩೪೨ ಅರ್ಜಿಗಳು ಉಳಿದಿವೆ. ಈ ಬಗ್ಗೆ ಮಾರ್ಚ್ ೩೧ಕ್ಕೆ ರಿಪೋರ್ಟ್ ಬರಬೇಕಾಗಿದ್ದು ಅದು ಇನ್ನೂ ಬಂದಿಲ್ಲ ಬಹುಶಃ ಇಷ್ಟೆಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಮುಗಿಸಿರಬಹುದು. ಆದರೂ ಪ್ರಾಬ್ಲಮ್ಸ್ ಏನಾದರೂ ಇದ್ದರೆ, ಅದನ್ನು ಡೈರೆಕ್ಟಾಗಿ ಹೇಳಿದರೆ ನಾನು ನೋಡುತ್ತೇನೆ.

ಶ್ರೀ ಕೆ. ಕುಶಾಲ.—ಅರ್ಜಿ ಸಲ್ಲಿಸಿದ ನಂತರ ತಡವಾದರೆ ಅದರ ನವೀಕರಣಕ್ಕೆ ಮತ್ತೆ ಎರಡು ತಿಂಗಳು ಬೇಕು. ನವೀಕರಣಕ್ಕೆ ಅರ್ಜಿ ಹಾಕಿದರೆ ಅದಕ್ಕೆ ಸ್ವೀಕೃತ ರಶೀದಿ ಬರುವುದು ಒಂದುಒಂದೂವರೆ ತಿಂಗಳು ಆಗುತ್ತದೆ. ನಿಜಕ್ಕೂ ಇದರಿಂದ ಅನ್ಯಾಯವಾಗುತ್ತಿದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ಇಲಾಖೆಯಲ್ಲಿ ನಡೆಯುವಷ್ಟು ಲಂಚ ಇನ್ಯಾವ ಇಲಾಖೆಯಲ್ಲೂ ನಡೆಯುತ್ತಿಲ್ಲ. ಇವತ್ತು ಗಣಿ ಇಲಾಖೆ ಕಚೇರಿಗೆ ಹೋದರೆ ಬೆಳಿಗ್ಗೆ ೧೦ ರಿಂದ ಸಂಜೆವರೆಗೆ ಅಲೆದಾಡುವ ಜನರನ್ನು ನೋಡಿದರೆ ಬಹಳಷ್ಟು ತೊಂದರೆ ಆಗುತ್ತಿದೆ. ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.